ESTD : 1880

# ST ALOYSIUS

(DEEMED TO BE UNIVERSITY)
MANGALURU, KARNATAKA 575003 - INDIA

# NEWS CLIPPINGS

## 16-09-2025 TO 30-09-2025

*Varthabharathi* 19-09-2025

### ತೆಂಕನಿಡಿಯೂರು ಕಾಲೇಜಿನಲ್ಲಿ ವಿಶ್ವ ಪ್ರಜಾಪ್ರಭುತ್ವ ದಿನಾಚರಣೆ



ಉಡುಪಿ, ಸೆ.18: ಸಂವಿಧಾನದ ಮೌಲ್ಯಗಳನ್ನು ಸಾಕಾರಗೊಳಿಸುವ ಉತ್ತಮ ಶಾಸನ ರೂಪಿಸುವ ರಾಜಕಾರಣದಿಂದ ಇಂದಿನ ಯುವಜನತೆ ವಿಮುಖವಾಗುತ್ತಿರುವುದು ಅತ್ಯಂತ ಕಳವಳಕಾರಿ. ಯುವಜನತೆ ನೈತಿಕ ರಾಜಕಾರಣದಲ್ಲಿ ಕ್ರಿಯಾಶೀಲರಾದಷ್ಟು ನಮ್ಮ ಪ್ರಜಾಪ್ರಭುತ್ವ ಗಟ್ಟಿಗೊಳ್ಳುತ್ತದೆ ಎಂದು ಮಂಗಳೂರು ಸಂತ ಅಲೋಶಿಯಸ್ ಕಾಲೇಜಿನ ರಾಜಕೀಯ ಶಾಸ್ತ್ರ ಸಹ ಪ್ರಾಧ್ಯಾಪಕಿ ಡಾ.ಶಕೀಲಾ ಹೆಗ್ಡೆ ಹೇಳಿದ್ದಾರೆ.

ತೆಂಕನಿಡಿಯೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಐಕ್ಯುಎಸಿ ಹಾಗೂ ರಾಜಕೀಯ ಶಾಸ್ತ್ರ ವಿಭಾಗದ ಆಶ್ರಯದಲ್ಲಿ ವಿಶ್ವ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ 'ಭಾರತದ ಪ್ರಜಾಪ್ರಭುತ್ವವನ್ನು ಸಶಕ್ತ ಗೊಳಿಸುವಲ್ಲಿ ಯುವಜನತೆಯ ಪಾತ್ರ'ದ ಕುರಿತು ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಗೋಪಾಲಕೃಷ್ಣ ಎಂ.ಗಾಂವ್ಕರ್ ಪ್ರತಿಜ್ಞಾವಿಧಿ ಬೋಧಿಸಿದರು. ಇದೇ ಸಂದರ್ಭ ರಾಜ್ಯಶಿಕ್ಷಣ ನೀತಿಯಡಿ ಮಂಗಳೂರು ವಿವಿಯ ಎಲ್ಲಾ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಇರುವ ಕಡ್ಡಾಯ ಪತ್ರಿಕೆ ಸಾಂವಿಧಾನಿಕ ಮೌಲ್ಯಗಳ ಕುರಿತಾಗಿ ಡಾ.ಶಕೀಲಾ ಹೆಗ್ಡೆ ಮತ್ತು ಪ್ರಶಾಂತ್ ನೀಲಾವರ ಬರೆದ ಪುಸ್ತಕವನ್ನು ಪ್ರಾಂಶುಪಾಲರು ಬಿಡುಗಡೆಗೊಳಿಸಿದರು.

ಕಾಲೇಜಿನ ಐಕ್ಯುಎಸಿ ಸಂಚಾಲಕ ಡಾ.ವಿಷ್ಣುಮೂರ್ತಿ ಪ್ರಭು, ಶೈಕ್ಷಣಿಕ ಸಲಹೆಗಾರ ಪ್ರೊ.ಶ್ರೀಧರ ಭಟ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ರಾಜ ಕುಮಾರ್, ಗ್ರಂಥಪಾಲಕ ಕೃಷ್ಣ ಸಾಸ್ತಾನ ಉಪಸ್ಥಿತರಿದ್ದರು. ರಾಜಕೀಯ ಶಾಸ್ತ್ರ ಸಹಪ್ರಾಧ್ಯಾಪಕ ಪ್ರಶಾಂತ ನೀಲಾವರ ಕಾರ್ಯಕ್ರಮ ನಿರೂಪಿಸಿದರು.

*Vijayakarnataka*

*23-09-2025*

# ಇಂದು ತುಳು ವಿಚಾರ ಸಂಕಿರಣ

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ 'ತುಳು ಬರವು ಬಾಸೆದ ಪರಿಪು' ರಾಷ್ಟ್ರೀಯ ವಿಚಾರ ಸಂಕಿರಣ ಸೆ.23ರಂದು ಮಂಗಳವಾರ ನಡೆಯಲಿದೆ.

ತುಳು ಸಾಹಿತಿ ಮತ್ತು ಸಂಶೋಧಕರಾದ ಡಾ.ಇಂದಿರಾ ಹೆಗ್ಗಡೆ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ಸಂತ ಅಲೋಶಿಯಸ್ ವಿವಿಯ ಕುಲಪತಿಗಳಾದ ರೆ.ಡಾ. ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಭಾಗವಹಿಸಲಿದ್ದಾರೆ. ಬಳಿಕ ಮೂರು ವಿಚಾರ ಗೋಷ್ಠಿ ನಡೆಯಲಿದ್ದು ಸಂಪನ್ಮೂಲ ವ್ಯಕ್ತಿಗಳಾಗಿ ಕಣ್ಣೂರು ವಿವಿ ಪ್ರಾಧ್ಯಾಪಕ ಡಾ.ರಾಧಾಕೃಷ್ಣ ಬೆಳ್ಳೂರು, ಕುಪ್ಪಂ ದ್ರಾವಿಡ ವಿವಿಯ ಸಹ ಪ್ರಾಧ್ಯಾಪಕ ರಾದ ಡಾ. ಎಂ ಎಸ್. ದುರ್ಗಾ ಪ್ರವೀಣ ಮತ್ತು ಸಂತ ಅಲೋಶಿಯಸ್ ವಿವಿಯ ಸಹ ಪ್ರಾಧ್ಯಾಪಕರಾದ ಪ್ರಶಾಂತಿ ಶೆಟ್ಟಿ ಇರುವೈಲು ಭಾಗವಹಿಸಲಿದ್ದಾರೆ. ಎಂದು ಪ್ರಕಟಣೆ ತಿಳಿಸಿದೆ.

Udayavani 23-09-2025

# ಇಂದು ತುಳು ರಾಷ್ಟ್ರೀಯ ವಿಚಾರ ಸಂಕಿರಣ

**ಮಹಾನಗರ, ಸೆ. 22:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಇವುಗಳ ಜಂಟಿ ಆಶ್ರಯದಲ್ಲಿ 'ತುಳು ಬರವು ಬಾಸೆದ ಪರಿಪು' ರಾಷ್ಟ್ರೀಯ ವಿಚಾರ ಸಂಕಿರಣ ಸೆ. 23ರಂದು ನಡೆಯಲಿದೆ.

ವಿಚಾರ ಸಂಕಿರಣದ ಉದ್ಘಾಟನೆ ಹಾಗೂ ತುಳು ವಿಭಾಗಕ್ಕೆ ಶುಭಾಶಂಸನೆಯನ್ನು ತುಳು ಸಾಹಿತಿ ಮತ್ತು ಸಂಶೋಧಕರಾದ ಡಾ। ಇಂದಿರಾ ಹೆಗ್ಡೆ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಂತ ಅಲೋಶಿಯಸ್ ವಿ.ವಿ. ಯ ಕುಲಪತಿ ಡಾ। ಪ್ರವೀಣ್ ಮಾರ್ಟಿಸ್ ಎಸ್. ಜೆ. ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಭಾಗವಹಿಸಲಿದ್ದಾರೆ. ಆ ಬಳಿಕ ಮೂರು ವಿಚಾರ ಗೋಷ್ಠಿ ನಡೆಯಲಿದ್ದು ಸಂಪನ್ಮೂಲ ವ್ಯಕ್ತಿಗಳಾಗಿ ಕಣ್ಣೂರು ವಿ.ವಿ.ಯ ಪ್ರಾಧ್ಯಾಪಕರಾದ ಡಾ। ರಾಧಾಕೃಷ್ಣ ಬೆಳ್ಳೂರು, ಕುಪ್ಪಂ ದ್ರಾವಿಡ ವಿ.ವಿ. ಯ ಸಹ ಪ್ರಾಧ್ಯಾಪಕರಾದ ಡಾ। ಎಂ. ಎಸ್. ದುರ್ಗಾಪ್ರವೀಣ ಮತ್ತು ಸಂತ ಅಲೋಶಿಯಸ್ ವಿ.ವಿ. ಯ ಸಹ ಪ್ರಾಧ್ಯಾಪಕರಾದ ಪ್ರಶಾಂತಿ ಶೆಟ್ಟಿ ಇರುವೈಲು ಭಾಗವಹಿಸಲಿದ್ದಾರೆ.

ಸಮಾರೋಪದಲ್ಲಿ ರಮೇಶ್ ಮಂಜೇಶ್ವರ ಇವರ ನಿರ್ದೇಶನದ 'ಆಟಿದ ಭೂತಾರಾಧನೆ' ಸಾಕ್ಷ್ಯಚಿತ್ರ ಪ್ರದರ್ಶನವಿದೆ ಎಂದು ಪ್ರಕಟಣೆ ತಿಳಿಸಿದೆ.

Udayavani 24-09-2025

# ಮನೋರಮಾ ಎಂ. ಭಟ್ ದತ್ತಿನಿಧಿಗೆ ಆಯ್ಕೆ





**ಮಹಾನಗರ, ಸೆ. 21:** ಸಾಹಿತಿ ಮನೋರಮಾ ಎಂ. ಭಟ್ ಅವರ ಹೆಸರಿನಲ್ಲಿ ಅವರ ಮಕ್ಕಳಾದ ಜಯರಾಮ್ ಮುಳಿಯ, ಮಹೇಶ್ ಭಟ್ ಮುಳಿಯ ಅವರು ಬಿ.ಎ. ಪದವಿಯಲ್ಲಿ ಕನ್ನಡ ಸಾಹಿತ್ಯವನ್ನು ಕಲಿಯುವ ವಿದ್ಯಾರ್ಥಿನಿಯರನ್ನು ಬೆಂಬಲಿಸಲು ಸ್ಥಾಪಿಸಿರುವ ದತ್ತಿನಿಧಿಗೆ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರಾದ ಶಿವಮೊಗ್ಗ ಜಿಲ್ಲೆಯ ಕಳಸದ ಮಿನಾಜ್, ಕಲಬುರಗಿ ಜಿಲ್ಲೆಯ ಶಂಕ್ರಬಾಯಿ ಇವರಿಗೆ ಸಂದಿದೆ.

ವರುಷಕ್ಕೆ ಇಪ್ಪತ್ತು ಸಾವಿರದಂತೆ ಮೂರು ವರ್ಷಕ್ಕೆ ಒಟ್ಟು ಅರುವತ್ತು ಸಾವಿರ ರೂಪಾಯಿಗಳನ್ನು ಈ ದತ್ತಿನಿಧಿಯು ಹೊಂದಿದೆ. ಪಿಯುಸಿಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಇಬ್ಬರು ವಿದ್ಯಾರ್ಥಿನಿಯರು ಈ ದತ್ತಿನಿಧಿಗೆ ಅರ್ಹರಾಗಿರುತ್ತಾರೆ. ದತ್ತಿನಿಧಿಯ ಸ್ಥಾಪಕರಲ್ಲೊಬ್ಬ ಮಹೇಶ್ ಎಂ. ಭಟ್, ವಿಭಾಗ ಮುಖ್ಯಸ್ಥ ಡಾ। ಮಹಾಲಿಂಗ ಭಟ್, ಹಿರಿಯ ಕನ್ನಡ ಪ್ರಾಧ್ಯಾಪಕರಾದ ಡಾ। ನರಸಿಂಹ ಮೂರ್ತಿ ಮತ್ತು ಡಾ। ವಿಶ್ವನಾಥ ಬದಿಕಾನ ಈ ನಾಲ್ಕು ಮಂದಿಯ ಸಮಿತಿ ಈ ಆಯ್ಕೆಯನ್ನು ನಡೆಸಿದೆ ಎಂದು ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಎಸ್. ಜೆ., ಸಹ ಕುಲಾಧಿಪತಿ ಮತ್ತು ರೆಕ್ಟರ್ ವಂ। ಮೆಲ್ವಿನ್ ಜೋಸೆಫ್ ಪಿಂಟೋ ಎಸ್. ಜೆ. ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Hosadigantha 24-09-2025

# ಕುಂದಾಪುರದ ನಿಶಾಲಿಗೆ ಪ್ರೈಡ್ ಆಫ್ ಇಂಡಿಯಾ- ಮಿಸ್ ಇಂಡಿಯಾ ಕಿರೀಟ

• **ಕುಂದಾಪುರ:** ದಿಲ್ಲಿಯ ಪ್ರತಿಷ್ಠಿತ ಡಿ. ಕೆ. ವೆಜೆನ್ಸ್ಟ್ ಸಂಸ್ಥೆ ಅವರು ಆಯೋಜಿಸುವ 'ಪ್ರೈಡ್ ಆಫ್ ಇಂಡಿಯಾ- ಮಿಸ್ ಇಂಡಿಯಾ 2025' ಕಿರೀಟವು ಕುಂದಾಪುರ ಮೂಲದ ನಿಶಾಲಿ ಅವರ ಮುಡಿಗೇರಿದೆ.

ಹೊಸದಿಲ್ಲಿಯ ರಯಾಡಿಸನ್ ಬ್ಲೂ ಹೋಟೆಲಿನಲ್ಲಿ ಸೋಮವಾರ ನಡೆದ ಮಿಸ್ ಇಂಡಿಯಾ -ಪ್ರೈಡ್ ಆಫ್ ಇಂಡಿಯಾ 2025 ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳಿಂದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಆಯ್ಕೆಯಾಗಿ ಬಂದಿದ್ದ 44 ಸ್ಪರ್ಧಿಗಳನ್ನು ಎದುರಿಸಿ ನಿಶಾಲಿ ಈ ಪ್ರತಿಷ್ಠಿತ ಟೈಟಲ್‌ಗೆ ಕೊರಳೊಡ್ಡುವುದರ ಮೂಲಕ ರಾಜ್ಯಕ್ಕೆ ಹೆಮ್ಮೆ ಸಂಭ್ರಮ ತಂದಿದ್ದಾರೆ. ನಜ್ಮೀ ಸಯೀದ್ ಹಾಗೂ ಡಾ. ಜಿಮ್ಮಿ ಗರಿಮಾ ಕುಮಾರಿ ಅವರು ನಿಶಾಲಿಗೆ ಪ್ರೈಡ್ ಆಫ್ ಇಂಡಿಯಾ - ಮಿಸ್ ಇಂಡಿಯಾ 2025ರ ಕಿರೀಟವನ್ನು ತೊಡಿಸಿದರು.

ಟ್ಯಾಲೆಂಟ್ ಸುತ್ತಿನಲ್ಲಿ ಈ ನೆಲದ ಹೆಮ್ಮೆಯ ಯಕ್ಷಗಾನ ಪ್ರದರ್ಶನ ನೀಡಿ ಅವರು ಎಲ್ಲರ ಮೆಚ್ಚುಗೆ ಗಳಿಸಿದ್ದರು. ಕುಂದಾಪುರದ ಬರೆಕಟ್ಟುನಿಂದ ದಿಲ್ಲಿಯವರೆಗಿನ ಈ ಪಯಣವು ನನ್ನ ಜೀವಮಾನದ ಕನಸನ್ನು ನನಸಾಗಿಸಿದೆ ಎಂದು ನಿಶಾಲಿ ಸಂತಸವನ್ನು ಮಾಧ್ಯಮದೊಂದಿಗೆ ಹಂಚಿಕೊಂಡರು.

ಮಂಗಳೂರಿನ ಸೈಂಟ್ ಅಲೋಷಿಯಸ್ ಕಾಲೇಜಿನಲ್ಲಿ ಎಂ.ಎ ಜರ್ನಲಿಸಮ್ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ನಿಶಾಲಿ, ಮೂಲತ: ಕುಂದಾಪುರದವರಾದ ಬೆಂಗಳೂರಿನ ನಿವಾಸಿ ಶ್ರೀನಿಧಿ ಕಾರ್ಪೋರೇಷನ್ ಸಂಸ್ಥೆಯ ಆಡಳಿತ ನಿರ್ದೇಶಕ, ರಾಜ್ಯ ಪ್ರಶಸ್ತಿ ಪುರಸ್ಕೃತ ಉಮೇಶ್ ಕುಂದರ್ ಮತ್ತು ಜಾನಕಿ ಅವರ ಪುತ್ರಿ.



- ನಿಶಾಲಿ ಅವರ ಮುಡಿಗೆ 'ಪ್ರೈಡ್ ಆಫ್ ಇಂಡಿಯಾ- ಮಿಸ್ ಇಂಡಿಯಾ 2025' ಕಿರೀಟ
- ಟ್ಯಾಲೆಂಟ್ ಸುತ್ತಿನಲ್ಲಿ ಈ ನೆಲದ ಹೆಮ್ಮೆಯ ಯಕ್ಷಗಾನ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದ್ದರು

Udayavani 25-09-2025

# ನಿಶಾಲಿ ಕುಂದರ್ ಅವರಿಗೆ ಮಿಸ್ ಇಂಡಿಯಾ-ಪ್ರೈಡ್ ಆಫ್ ಇಂಡಿಯಾ 2025ರ ಗರಿ

ಮಂಗಳೂರು, ಸೆ. 24: ದಿಲ್ಲಿಯ ಡಿ.ಕೆ.ಪೇಜೆಂಟ್ ಸಂಸ್ಥೆ ಆಯೋಜಿಸುವ ಪ್ರೈಡ್ ಆಫ್ ಇಂಡಿಯಾ-ಮಿಸ್ ಇಂಡಿಯಾ-2025 ಸ್ಪರ್ಧೆಯಲ್ಲಿ ಕುಂದಾಪುರ ಮೂಲದ ನಿಶಾಲಿ ಗೆಲುವು ಸಾಧಿಸಿದ್ದಾರೆ.

ನಿಶಾಲಿ ಕುಂದರ್ ಆರು ತಿಂಗಳಿಂದ ಈ ಸ್ಪರ್ಧೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಟ್ಯಾಲೆಂಟ್ ಸುತ್ತಿನಲ್ಲಿ ಈ ನೆಲದ ಹೆಮ್ಮೆಯ ಯಕ್ಷಗಾನ ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಜ್ಯೂರಿಗಳೂ ಮೆಚ್ಚುಗೆ ತೋರಿದ್ದರು.

ದಿಲ್ಲಿಯಲ್ಲಿ ಇತ್ತೀಚೆಗೆ ನಡೆದ ಮಿಸ್ ಇಂಡಿಯಾ-ಪ್ರೈಡ್ ಆಫ್ ಇಂಡಿಯಾ-2025 ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳಿಂದ 44 ಸ್ಪರ್ಧಿಗಳು ಭಾಗವಹಿಸಿದ್ದರು. ಅಂತಿಮವಾಗಿ ನಿಶಾಲಿಗೆ ಕಿರೀಟ ತೊಡಿಸಲಾಯಿತು.



ನಿಶಾಲಿ ಬೆಂಗಳೂರಿನ ಖಾಸಗಿ ಕಂಪೆನಿಯ ಉದ್ಯೋಗಿ ಉಮೇಶ್ ಕುಂದರ್ ಮತ್ತು ಜಾನಕಿ ಅವರ ಪುತ್ರಿ. ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಎಂ.ಎ. ಜರ್ನಲಿಸಮ್ ವಿದ್ಯಾರ್ಥಿನಿ.

*Times of India*

*24-09-2025*

# Aloysian Fest 2025 begins tomorrow

**Mangaluru:** St Aloysius (Deemed to be University) announced Aloysian Fest 2025, a national-level undergraduate fest, to be held on Sept 25. This event brings together seven fests under one umbrella, providing a platform for students from various colleges across the country to showcase their talents.

Over 100 colleges from across India are expected to participate. The fest promises to be an unforgettable experience, fostering connections, inspiring creativity, and celebrating unity in diversity. "Fest 2025 embodies the university's commitment to nurturing talent, creativity, and innovation. We look forward to hosting students from across India and creating an unforgettable experience," said Praveen Martis, vice-chancellor of Aloysius. TNN

*Times of India 25-09-2025*

## Hindi Diwas

The department of Hindi, School of Languages and Culture Studies, St Aloysius (Deemed to be University), organised Hindi Diwas—Celebration of Hindi Virasath, recently. Nagaratna N Rao, professor of Hindi, University College, Hampankatta, in her address, highlighted the importance of learning the Hindi language.

*Vijayakarnataka*

*26-09-2025*

## ಅಲೋಶಿಯಸ್ ವಿವಿಯಲ್ಲಿ ಹಿಂದಿ ದಿನಾಚರಣೆ

**ಮಂಗಳೂರು:** ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಭಾಷಾ ಮತ್ತು ಸಂಸ್ಕೃತಿ ಅಧ್ಯಯನ ಶಾಲೆಯ ಹಿಂದಿ ವಿಭಾಗದ ವತಿಯಿಂದ ಹಿಂದಿ ದಿನಾಚರಣೆ ಸೋಮವಾರ ಎಲ್‌ಸಿಆರ್‌ಐ ಹಾಲ್‌ನಲ್ಲಿ ನಡೆಯಿತು.

ಮಂಗಳೂರು ವಿವಿ ಕಾಲೇಜಿನ ಹಿಂದಿ ಪ್ರಾಧ್ಯಾಪಕಿ ಡಾ. ನಾಗರತ್ನ ಎನ್. ರಾವ್ ಕಾರ್ಯಕ್ರಮ ಉದ್ಘಾಟಿಸಿದರು. ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾಲಯದ ಕುಲಪತಿ ಡಾ. ಪ್ರವೀಣ್ ಮಾರ್ಟಿಸ್ ಮಾತನಾಡಿ, ಕಾಲೇಜುಗಳಲ್ಲಿ ಹಿಂದಿ ದಿವಸ್ ಆಚರಿಸುವ ಮಹತ್ವ ವಿವರಿಸಿದರು. ಹಿಂದಿ ದಿವಸ್ ಆಚರಣೆಯ ಭಾಗವಾಗಿ ಸಾಥ್ ಸತೋರಿ, ಲಗೋರಿ, ತಾರೆ ಜಮೀನ್ ಪರ್, ತಶಾನ್ ಮತ್ತು ಬೆಂಕಿಯಿಲ್ಲದೆ ಅಡುಗೆ ಸೇರಿದಂತೆ ನಾನಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಾಲೇಜಿನ ರಿಜಿಸ್ಟ್ರಾರ್ ಡಾ. ಆಲ್ವಿನ್ ಡೇಸ, ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಕ್ರಿಸ್ಟೋಫರ್ ಡಿಸೋಜ, ಸಿಬ್ಬಂದಿ ಸಂಯೋಜಕಿ ರೋಯ್ಲಿ ರೇಖಾ ಬ್ರಾಗ್ಸ್, ವಿದ್ಯಾರ್ಥಿ ಸಂಯೋಜಕ ಅರ್ಮಾನ್ ಶೇಖ್ ಉಪಸ್ಥಿತರಿದ್ದರು. ಸಹ ಸಂಯೋಜಕಿ ಡಾ. ಸಂಧ್ಯಾ ಯು. ಸಿರ್ಸಿಕರ್ ಸ್ವಾಗತಿಸಿ ದರು. ವಿದ್ಯಾರ್ಥಿ ಸಂಯೋಜಕಿ ಅಲಿಯಾ ಖಾನ್ ವಂದಿಸಿದರು. ಸಾರಾ ನಿರೂಪಿಸಿದರು.

*Viajayakarnataka 25-09-2025*

# ಜರ್ಮನ್ ಲಾಂಗ್ವೇಜ್ ಸ್ಕೂಲ್ ಉದ್ಘಾಟನೆ

**ವಿಕ ಸುದ್ದಿಲೋಕ** ಮಂಗಳೂರು

ಶೈಕ್ಷಣಿಕವಾಗಿ ಹೊಸ ಸಾಧ್ಯತೆಗಳನ್ನು ತೆರೆದುಕೊಂಡಿರುವ ಮಂಗಳೂರಿನಲ್ಲಿ 'ಜರ್ಮನ್ ಲಾಂಗ್ವೇಜ್ ಸ್ಕೂಲ್' ಎಂ.ಜಿ. ರಸ್ತೆಯ ಎಂಪಾಯರ್ ಮಾಲ್‌ನಲ್ಲಿ ಬುಧವಾರ ಉದ್ಘಾಟನೆಗೊಂಡಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸದ ಕ್ಯಾ.ಬ್ರಿಜೇಶ್ ಚೌಟ, ಜರ್ಮನ್‌ಗೆ ಉದ್ಯೋಗ ಅಥವಾ ಶಿಕ್ಷಣಕ್ಕಾಗಿ ತೆರಳುವ ಜನರಿಗೆ ಇದರಿಂದ ಹೆಚ್ಚು ಅನುಕೂಲವಾಗಲಿದೆ ಎಂದರು.

ಜರ್ಮನ್‌ನ ಕೌನ್ಸುಲೇಟ್ ಕಚೇರಿಯ ಹಿರಿಯ ಸಲಹೆಗಾರ್ತಿ ಡಾ. ಮಂಜುಳಾ ಮುಂಡಕಾನ ಮಾತನಾಡಿ, ಜರ್ಮನ್ ಉದ್ಯೋಗ ವಲಯದಲ್ಲಿ ಭಾರತೀಯರಿಗೆ ಹೆಚ್ಚು ಅವಕಾಶಗಳು ದೊರೆಯುತ್ತಿದೆ. ಈ ನಿಟ್ಟಿನಲ್ಲಿ ಭಾರತ ಉತ್ತಮ ಸಂಬಂಧ ಕೂಡ ಬೆಳೆಸಿಕೊಂಡಿದೆ. ಪ್ರತೀ ವರ್ಷ ಲಕ್ಷಾಂತರ ಮಂದಿ ಶಿಕ್ಷಣ ಮುಗಿಸಿ ಉದ್ಯೋಗಕ್ಕೆ ಯುವಕರು ನಿರೀಕ್ಷೆಯಲ್ಲಿರುತ್ತಾರೆ. ಅಂತವರಿಗೆ ಜರ್ಮನ್‌ನಲ್ಲಿ ಹೆಚ್ಚು ಅವಕಾಶಗಳು ತೆರೆದುಕೊಳ್ಳುತ್ತದೆ. ಇದಕ್ಕಾಗಿ ಜರ್ಮನ್ ಭಾಷೆಯ ಕಲಿಕೆಗೆ ಇಂತಹ ಸ್ಕೂಲ್ ಹೆಚ್ಚು ಅನುಕೂಲವಾಗುತ್ತದೆ ಎಂದರು.



**ಜರ್ಮನ್ ಲಾಂಗ್ವೇಜ್ ಸ್ಕೂಲ್ ಎಂಜಿ ರಸ್ತೆಯ ಎಂಪಾಯರ್ ಮಾಲ್‌ನಲ್ಲಿ ಬುಧವಾರ ಉದ್ಘಾಟನೆಗೊಂಡಿತು.**

ಸಂತ ಅಲೋಶಿಯಸ್ ಕಾಲೇಜಿನ ವೈಸ್ ಚಾನ್ಸಲರ್ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಮಾತನಾಡಿ, ಜರ್ಮನ್ ಭಾಷೆಯ ಕಲಿಕೆಗೆ ಮಂಗಳೂರಿನಲ್ಲಿ ಹೊಸ ಕೇಂದ್ರ ಆರಂಭವಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಹೊಸ ಸಾಧ್ಯತೆ ಇದರಿಂದ ತೆರೆದುಕೊಳ್ಳಲಿದೆ. ಜರ್ಮನ್ ಜತೆಗೆ ಮಂಗಳೂರು ನಿಕಟ ಸಂಪರ್ಕ ಇರುವುದರಿಂದ ಹೊಸ ಸ್ಕೂಲ್ ಹಲವಾರು ಜನರಿಗೆ ಹೆಚ್ಚು ಉಪಯೋಗವಾಗಲಿದೆ ಎಂದರು.

*Udayavani 25-09-2025*

# ಮಂಗಳೂರಿನಲ್ಲಿ 'ಜರ್ಮನ್ ಲಾಂಗ್ವೇಜ್ ಸ್ಕೂಲ್' ಉದ್ಘಾಟನೆ

**ಮಹಾನಗರ, ಸೆ. 24:** ಶೈಕ್ಷಣಿಕವಾಗಿ ಹೊಸ ಸಾಧ್ಯತೆಗಳನ್ನು ತೆರೆದುಕೊಂಡಿರುವ ಮಂಗಳೂರಿನಲ್ಲಿ 'ಜರ್ಮನ್ ಲಾಂಗ್ವೇಜ್ ಸ್ಕೂಲ್' ಎಂಜಿ ರಸ್ತೆಯ ಎಂಪಾಯರ್ ಮಾಲ್‌ನ ಮೊದಲ ಮಹಡಿಯಲ್ಲಿ ಬುಧವಾರ ಉದ್ಘಾಟನೆಗೊಂಡಿತು. ಜರ್ಮನ್‌ನಲ್ಲಿ ಉದ್ಯೋಗ, ಶಿಕ್ಷಣಕ್ಕಾಗಿ ತೆರಳುವವರಿಗೆ ಅನುಕೂಲವಾಗುವ ಅಲ್ಲಿನ ಭಾಷಾ ಕಲಿಕೆಯ ಕೇಂದ್ರ ಇದಾಗಿದೆ.

ಉದ್ಘಾಟನ ಕಾರ್ಯಕ್ರಮದಲ್ಲಿ ಸಂಸದ ಕ್ಯಾ। ಬ್ರಿಜೇಶ್ ಚೌಟ ಅವರು ಭಾಗವಹಿಸಿದ್ದರು. ಮಂಗಳೂರು ಗ್ಲೋಬಲ್ ಸಿಟಿಯಾಗಿ ಹಂತಹಂತವಾಗಿ ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಜರ್ಮನ್ ಭಾಷೆಯನ್ನು ಕಲಿಯುವ ಹೊಸ ಅವಕಾಶ ಇದೀಗ ಮಂಗಳೂರಿನಲ್ಲಿ ಆರಂಭವಾಗಿರುವುದು ಸಂತೋಷದಾಯಕ ವಿಷಯ. ಜರ್ಮನ್‌ಗೆ ಉದ್ಯೋಗ ಅಥವಾ ಶಿಕ್ಷಣಕ್ಕಾಗಿ ತೆರಳುವ ಜನರಿಗೆ ಇದರಿಂದ ಹೆಚ್ಚು ಅನುಕೂಲವಾಗಲಿದೆ ಎಂದರು.



ಜರ್ಮನ್ ನ ಕೌನ್ಸುಲೇಟ್ ಕಚೇರಿಯ ಹಿರಿಯ ಸಲಹೆಗಾರ್ತಿ ಡಾ। ಮಂಜುಳಾ ಮುಂಡಕಾನ ಮಾತನಾಡಿ, ಜರ್ಮನ್ ಉದ್ಯೋಗ ವಲಯದಲ್ಲಿ ಭಾರತೀಯರಿಗೆ ಹೆಚ್ಚು ಅವಕಾಶಗಳು ದೊರೆಯುತ್ತಿದೆ. ಈ ನಿಟ್ಟಿನಲ್ಲಿ ಭಾರತ ಉತ್ತಮ ಸಂಬಂಧ ಕೂಡ ಬೆಳೆಸಿಕೊಂಡಿದೆ. ಪ್ರತೀ ವರ್ಷ ಲಕ್ಷಾಂತರ ಮಂದಿ ಶಿಕ್ಷಣ ಮುಗಿಸಿ ಉದ್ಯೋಗಕ್ಕೆ ಯುವಕರು ನಿರೀಕ್ಷೆಯಲ್ಲಿರುತ್ತಾರೆ. ಅಂತವರಿಗೆ ಜರ್ಮನ್‌ನಲ್ಲಿ ಹೆಚ್ಚು ಅವಕಾಶಗಳು ತೆರೆದುಕೊಳ್ಳುತ್ತದೆ. ಇದಕ್ಕಾಗಿ ಜರ್ಮನ್ ಭಾಷೆಯ ಕಲಿಕೆಗೆ ಇಂತಹ ಸ್ಕೂಲ್ ಹೆಚ್ಚು ಅನುಕೂಲವಾಗುತ್ತದೆ ಎಂದರು.

ಸಂತ ಅಲೋಶಿಯಸ್ ಕಾಲೇಜಿನ ವೈಸ್ ಚಾನ್ಸಲರ್ ಡಾ। ಪ್ರವೀಣ್ ಮಾರ್ಟಿಸ್ ಎಸ್.ಜೆ. ಮಾತನಾಡಿ, ಜರ್ಮನ್ ಭಾಷೆಯ ಕಲಿಕೆಗೆ ಮಂಗಳೂರಿನಲ್ಲಿ ಹೊಸ ಕೇಂದ್ರ ಆರಂಭವಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಹೊಸ ಸಾಧ್ಯತೆ ಇದರಿಂದ ತೆರೆದುಕೊಳ್ಳಲಿದೆ. ಜರ್ಮನ್ ಜತೆಗೆ ಮಂಗಳೂರು ನಿಕಟ ಸಂಪರ್ಕ ಇರುವುದರಿಂದ ಹೊಸ ಸ್ಕೂಲ್ ಹಲವಾರು ಜನರಿಗೆ ಹೆಚ್ಚು ಉಪಯೋಗವಾಗಲಿದೆ ಎಂದರು.

*Prajavani 26-09-2025*



ಮಂಗಳೂರಿನಲ್ಲಿ ಆರಂಭಿಸಲಾದ 'ಜರ್ಮನ್ ಲ್ಯಾಂಗ್ವೇಜ್ ಸ್ಕೂಲ್'ಅನ್ನು ಸಂಸದ ಕ್ಯಾ. ಬ್ರಿಜೇಶ್ ಚೌಟ ಉದ್ಘಾಟಿಸಿದರು

## ಮಂಗಳೂರಿನಲ್ಲಿ 'ಜರ್ಮನ್ ಲ್ಯಾಂಗ್ವೇಜ್ ಸ್ಕೂಲ್' ಆರಂಭ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಎಂಜಿ ರಸ್ತೆಯ ಎಂಪಾಯರ್ ಮಾಲ್‌ನಲ್ಲಿ ಆರಂಭಿಸಲಾದ 'ಜರ್ಮನ್ ಲ್ಯಾಂಗ್ವೇಜ್ ಸ್ಕೂಲ್' ಅನ್ನು ಈಚೆಗೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಮಂಗಳೂರು ಹಂತ ಹಂತವಾಗಿ ಜಾಗತಿಕ ನಗರವಾಗಿ ಬೆಳೆಯುತ್ತಿದೆ. ಜರ್ಮನ್ ಭಾಷೆಯನ್ನು ಕಲಿಯುವ ಅವಕಾಶ ಮಂಗಳೂರಿನ ಜನರಿಗೆ ಲಭಿಸಿರುವುದು ಒಳ್ಳೆಯ ಬೆಳವಣಿಗೆ. ಉದ್ಯೋಗ ಅಥವಾ ಶಿಕ್ಷಣಕ್ಕಾಗಿ ಜರ್ಮನಿಗೆ ತೆರಳುವವರಿಗೆ ಇದರಿಂದ ಅನುಕೂಲವಾಗಲಿದೆ' ಎಂದರು.

ಜರ್ಮನ್‌ನ ಕಾನ್ಸುಲೇಟ್ ಕಚೇರಿಯ ಸಲಹೆಗಾರ್ತಿ ಮಂಜುಳಾ ಮುಂಡಕಾನ ಮಾತನಾಡಿ, 'ಜರ್ಮನಿಯ ಉದ್ಯೋಗ ಕ್ಷೇತ್ರದಲ್ಲಿ ಭಾರತೀಯರಿಗೆ ಹೆಚ್ಚು ಅವಕಾಶಗಳು ದೊರೆಯುತ್ತಿವೆ. ಭಾರತದ ಜೊತೆ ಆ ದೇಶ ಉತ್ತಮ ಬಾಂಧವ್ಯ ಬೆಳೆಸಿಕೊಂಡಿದೆ. ಉದ್ಯೋಗಕ್ಕಾಗಿ ಜರ್ಮನಿಗೆ ಹೋಗುವ ಭಾರತೀಯ ಯುವಕರಿಗೆ ಜರ್ಮನ್ ಭಾಷೆ ತಿಳಿದಿದ್ದರೆ ಅನುಕೂಲವಾಗುತ್ತದೆ. ಇಂತಹ ಕಲಿಕಾ ಕೇಂದ್ರಗಳು ಈ ನಿಟ್ಟಿನಲ್ಲಿ ಸಹಕಾರಿಯಾಗಿವೆ' ಎಂದರು.

ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, 'ಜರ್ಮನಿ ಜತೆಗೆ ಮಂಗಳೂರು ನಿಕಟ ಸಂಪರ್ಕ ಇರುವುದರಿಂದ ಈ ಸ್ಕೂಲ್ ಇಲ್ಲಿನ ಯುವಕರಿಗೆ ಹೆಚ್ಚು ಉಪಯೋಗಿಯಾಗಲಿದೆ' ಎಂದು ಹೇಳಿದರು.

*Times of India 26-09-2025*

**Seminar held**

The Postgraduate Department of Studies and Research in Social Work, St Aloysius (Deemed to be University), will be organising a one-day national seminar titled 'Climate Literacy and Environmental Governance: Empowering the Next Generation' on Sept 29. Vijay Moras, trustee CFAL and co-lead of The Amara (Prakrutiye Pragati) Initiative, Mangaluru, is the chief guest.

*Times of India 30-09-2025*

**Theatre league today**

The Ranga Adhyayana Kendra at St Aloysius will organise Aloysius Theatre League -5.0, a students' theatre competition at LCRI, Auditorium, on Tuesday from 11am to 5pm. Entry is free.

Prajavani 27-09-2025



'ತುಳು ಬರವು ಬಾಸೆದ ಪರಿಪು' ಕುರಿತ ವಿಚಾರ ಸಂಕಿರಣವನ್ನು ಸಾಹಿತಿ ಇಂದಿರಾ ಹೆಗ್ಗೆ ಉದ್ಘಾಟಿಸಿದರು

# ಭಾಷೆಯ ಉಳಿವು ಅಗತ್ಯ: ಇಂದಿರಾ

ಪ್ರಜಾವಾಣಿ ವಾರ್ತೆ

ಮಂಗಳೂರು: 'ತುಳುನಾಡಿನ ಸಂಸ್ಕೃತಿ ಪರಂಪರೆಗಳ ಬಗ್ಗೆ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ಅಂತಹ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ತುಳು ಭಾಷೆಯ ಅಭಿವೃದ್ಧಿ ಅತ್ಯಗತ್ಯ' ಎಂದು ತುಳು ಮತ್ತು ಕನ್ನಡ ಸಾಹಿತಿ ಇಂದಿರಾ ಹೆಗ್ಗೆ ಹೇಳಿದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ಕೇಂದ್ರದ ತುಳು ವಿಭಾಗವು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ 'ತುಳು ಬರವು ಬಾಸೆದ ಪರಿಪು' ಎಂಬ ಒಂದು ದಿನದ ತುಳು ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದ ಅತಿಥಿಯಾಗಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಸೇಂಟ್ ಅಲೋಶಿಯಸ್ ವಿಶ್ವವಿದ್ಯಾನಿಲಯದ ಕುಲಸಚಿವ ಫಾ. ಪ್ರವೀಣ್ ಮಾರ್ಟಿಸ್ ಅವರು ಪ್ರಾದೇಶಿಕ ಭಾಷೆಗಳ ಮಹತ್ವದ ಬಗ್ಗೆ ವಿವರಿಸುತ್ತಾ, 'ತುಳು ಭಾಷೆಯಲ್ಲಿ ಹೆಚ್ಚಿನ ಮತ್ತು ಮೌಲಿಕ ಸಾಹಿತ್ಯ ಕೃತಿಗಳನ್ನು ರಚಿಸಿ, ಭಾಷೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಬೇಕು' ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಗೌರವ ಅತಿಥಿಯಾಗಿದ್ದರು. ಕಾಲೇಜಿನ ರಿಜಿಸ್ಟ್ರಾರ್ ಅಲ್ವಿನ್ ದೇಸಾ, ಸಂಶೋಧನಾ ಮತ್ತು ಅಭಿವೃದ್ಧಿ ಕೋಶದ ನಿರ್ದೇಶಕ ಚಂದ್ರಶೇಖರ ಶೆಟ್ಟಿ, ತುಳು ವಿಭಾಗದ ಮುಖ್ಯಸ್ಥೆ ಪ್ರಶಾಂತಿ ಶೆಟ್ಟಿ ವೇದಿಕೆಯಲ್ಲಿದ್ದರು.

ಪ್ರಶಾಂತಿ ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

ಕೇರಳದ ಕಣ್ಣೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಧಾಕೃಷ್ಣ ಬೆಳ್ಳೂರು, ಆಂಧ್ರಪ್ರದೇಶದ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಂ.ಎಸ್. ದುರ್ಗಾಪ್ರವೀಣ ಮತ್ತು ಅಲೋಶಿಯಸ್ ವಿವಿಯ ತುಳು ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರಶಾಂತಿ ಶೆಟ್ಟಿ ಇರುವೈಲು ಅವರು ಮೂರು ಗೋಷ್ಠಿಗಳಲ್ಲಿ ಮಾತನಾಡಿದರು.

ಮಂಗಳೂರು ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ನಿವೃತ್ತ ಪ್ರಾಧ್ಯಾಪಕ ನಾ. ದಾಮೋದರ ಶೆಟ್ಟಿ ಗೋಷ್ಠಿಗಳನ್ನು ನಡೆಸಿಕೊಟ್ಟರು.

Udayavani 29-09-2025

## ತುಳು ಬರವು ಬಾಸೆದ ಪರಿಪು; ವಿಚಾರ ಸಂಕಿರಣ

# ತುಳು ಭಾಷೆ ಅಭಿವೃದ್ಧಿ ಮುಖ್ಯ: ಇಂದಿರಾ ಹೆಗ್ಡೆ

ಮಹಾನಗರ, ಸೆ. 28: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ಶಾಲೆಯ ತುಳು ವಿಭಾಗವು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ 'ತುಳು ಬರವು ಬಾಸೆದ ಪರಿಪು' ಎಂಬ ಒಂದು ದಿನದ ತುಳು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತು.

ಮುಖ್ಯ ಅತಿಥಿಯಾಗಿದ್ದ ತುಳು ಲೇಖಕಿ ಹಾಗೂ ವಿದ್ವಾಂಸರಾದ ಡಾ| ಇಂದಿರಾ ಹೆಗ್ಡೆ ಮಾತನಾಡಿ, ಪ್ರಾಚೀನ ಕಾಲದಲ್ಲಿ ಸ್ಥಾಪಿತವಾದ ತುಳುವ ಶಾಸನದ ಬಗ್ಗೆ ವಿವರಿಸಿ, ಅಂತಹ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಪರಂಪರೆಯನ್ನು ಸಂರಕ್ಷಿಸಲು ತುಳು ಭಾಷೆಯ ಅಭಿವೃದ್ಧಿ ಅತ್ಯಂತ ಮುಖ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಲೋಶಿಯಸ್ ವಿಶ್ವವಿದ್ಯಾನಿಲಯದ ಕುಲಸಚಿವ ವಂ| ಡಾ.ಪ್ರವೀಣ್ ಮಾರ್ಟಿಸ್ ಮಾತನಾಡಿ, ತುಳು ಭಾಷೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಬೇಕಾಗಿದೆ ಎಂದರು.



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಗೌರವ ಅತಿಥಿಗಳಾಗಿದ್ದರು. ಕಾಲೇಜಿನ ರಿಜಿಸ್ಟ್ರಾರ್ ಡಾ| ಅಲ್ವಿನ್ ಡೇಸಾ, ಸಂಶೋಧನ ಮತ್ತು ಅಭಿವೃದ್ಧಿ ಕೋಶದ ನಿರ್ದೇಶಕ ಡಾ| ಚಂದ್ರಶೇಖರ ಶೆಟ್ಟಿ ಉಪಸ್ಥಿತರಿದ್ದರು.

ತುಳು ವಿಭಾಗದ ಮುಖ್ಯಸ್ಥೆ ಪ್ರಶಾಂತಿ ಶೆಟ್ಟಿ ಸ್ವಾಗತಿಸಿ, ವಿಚಾರ ಸಂಕಿರಣದ ಬಗ್ಗೆ ವಿವರಿಸಿದರು. ಡಾ| ದಿನೇಶ್ ನಾಯಕ್ ನಿರೂಪಿಸಿದರು.

ಕೇರಳದ ಕಣ್ಣೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ| ರಾಧಾಕೃಷ್ಣ ಬೆಳ್ಳೂರು, ಆಂಧ್ರಪ್ರದೇಶದ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ| ಎಂ.ಎಸ್. ದುರ್ಗಾಪ್ರವೀಣ ಮತ್ತು ಅಲೋಶಿಯಸ್ ವಿವಿಯ ತುಳು ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರಶಾಂತಿ ಶೆಟ್ಟಿ ಇರುವೈಲು ಅವರು ಗೋಷ್ಠಿಗಳಲ್ಲಿ ಮಾತನಾಡಿದರು. ಮಂಗಳೂರು ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ವಿಶ್ರಾಂತ ಪ್ರಾಧ್ಯಾಪಕ ಡಾ| ನಾ. ದಾಮೋದರ ಶೆಟ್ಟಿ ಗೋಷ್ಠಿಗಳನು ನಡೆಸಿಕೊಟ್ಟರು.

*Vijayakarnataka 29-09-2025*

# ಆರೋಗ್ಯ ರಕ್ಷಣೆಯಲ್ಲಿ ಎಐ ಭವಿಷ್ಯ ಕಾರ್ಯಾಗಾರ



ಮಂಗಳೂರಿನ ಸಂತ ಅಲೋಶಿಯಸ್ ವಿವಿಯಲ್ಲಿ ಆರೋಗ್ಯ ರಕ್ಷಣೆಯಲ್ಲಿ ಎಐ ಕಾರ್ಯಾಗಾರ ನಡೆಯಿತು.

**ವಿಕ ಸುದ್ದಿಲೋಕ** ಮಂಗಳೂರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್, ಏಕಾ ಕೇರ್ ಸಹಯೋಗದೊಂದಿಗೆ 'ಆರೋಗ್ಯ ರಕ್ಷಣೆಯಲ್ಲಿ ಎಐ- ಭವಿಷ್ಯ' ಕಾರ್ಯಾಗಾರ ಶುಕ್ರವಾರ ನಡೆಯಿತು.

ಅಲೋಶಿಯಸ್ ಸ್ವಾಯತ್ತ ಕಾಲೇಜಿನ ರಿಜಿಸ್ಟ್ರಾರ್ ಡಾ. ಆಲ್ವಿನ್ ಡೇಸ ಅಧ್ಯಕ್ಷತೆ ವಹಿಸಿದ್ದರು. ಎಂಜಿನಿಯರಿಂಗ್ ಕಾಲೇಜಿನ ಡೀನ್ ಡಾ. ಎಸ್.ರೂಬನ್, ಕಾರ್ಯಕ್ರಮ ಸಂಯೋಜಕಿ ಅಶ್ವಿಜಾ, ಮತ್ತು ಪ್ರಿಯಾ ಜಾರ್ಜ್ ಉಪಸ್ಥಿತರಿದ್ದರು. ಮ್ಯೂಸಿಕ್ ಮುನಿ ಲ್ಯಾಬ್ಸ್‌ನ ಸಹ-ಸಂಸ್ಥಾಪಕ ಮತ್ತು ಏಕಾ ಕೇರ್‌ನ ಡೇಟಾ ಸೈನ್ಸ್ ಮುಖ್ಯಸ್ಥ ಡಾ. ಸಂಕಲ್ಪ್ ಗುಲಾಟಿ, ಮಧುಮೇಹ ಶಾಸ್ತ್ರ ತಜ್ಞೆ ಡಾ.ಸಂಜನಾ ಮಾಹಿತಿ ನೀಡಿದರ

*Udayavani 30-09-2025*



ಮಹಾನಗರ: ಸಂತ ಅಲೋಶಿಯಸ್ ಪರಿಗಣಿತ ವಿ.ವಿ.ಯ ಸ್ಕೂಲ್ ಆಫ್ ಎಂಜಿನಿಯರಿಂಗ್, ಏಕಾ ಕೇರ್‌ಸಹಯೋಗದೊಂದಿಗೆ, 'ಆರೋಗ್ಯ ರಕ್ಷಣೆಯಲ್ಲಿ ಎಐ – ಭವಿಷ್ಯದತ್ತ ಸಾಗುವತ್ತ ಸಾಗುವ ಎಐ ಬಗ್ಗೆ ಕಾರ್ಯಾಗಾರ ನಡೆಯಿತು. ಅಲೋಶಿಯಸ್ ಸ್ವಾಯತ್ತ ಕಾಲೇಜಿನ ರಿಜಿಸ್ಟ್ರಾರ್ ಡಾ| ಆಲ್ವಿನ್ ಡೇಸಾ, ಎಂಜಿನಿಯರಿಂಗ್ ಶಾಲೆಯ ಡೀನ್ ಡಾ| ಎಸ್. ರೂಬನ್, ಕಾರ್ಯಕ್ರಮ ಸಂಯೋಜಕರಾದ ಅಶ್ವಿಜಾ, ಪ್ರಿಯಾ ಜಾರ್ಜ್ ಉಪಸ್ಥಿರರಿದ್ದರು. ಮ್ಯೂಸಿಕ್ ಮುನಿ ಲ್ಯಾಬ್ಸ್‌ನ ಸಹ–ಸಂಸ್ಥಾಪಕ. ಏಕಾ ಕೇರ್‌ನ ಡೇಟಾ ಸೈನ್ಸ್‌ಮುಖ್ಯಸ್ಥ ಡಾ| ಸಂಕಲ್ಪ್ ಗುಲಾಟಿ, ಡಾ| ಸಂಜನಾ ಮಾತನಾಡಿದರು.